# ಅಧ್ಯಾಯ 2

ಶ್ರೀ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ



ಛಂದ :-ವಂದಿಸುವೆ ಶ್ರೀ ಸಿದ್ಧನಾಥಗೆ ಭಕ್ತ ಕರುಣಾಕರನಿಗೆ
ನಂದಿವಾಹನನಿರ್ದು ಧರೆಯೊಳವತರಿಸಿ ಬಂದಾತಗೆ
ಮಂದಮತಿಗಳ ಕೂಡ ಲೀಲಾ ಮಾಡಿ ಯುದ್ಧ ರಿಪಾತಗೆ
ಅಂಧಕಾರವ ತಪ್ಪಿಸೆನ್ನನು ಪಾಲಿಸುವ ಗುರುನಾಥಗೆ..

ಶ್ರೀ ಸಿದ್ಧ ಗುರುವರ್ಯನೇ ನಿನಗೆ ನಮಸ್ಕಾರವಿರಲಿ. ನಿನ್ನ ಸ್ಮರಣ ಮಾತ್ರದಿಂದ ವಿಘ್ನಗಳೆಲ್ಲಾ ಲಯ ಹೊಂದುವದು.ಅಂಥಾತನಾದ ನೀನು ಈ ನನ್ನ ಕೈಯಿಂದ ಗ್ರಂಥವನ್ನು ಬರಿಸುವಂಥವನಾಗು. ಯಾವಾತನ ವಸತಿಯು ಅಖಂಡ ಬ್ರಹದಲ್ಲಿರುವದು, ಅಂಥಾ ಸಿದ್ಧಾರೂಢ ದಯಾಘನನು ಭಕ್ತಜನರ ಸಲುವಾಗಿ ದೇಹವನ್ನು ಧರಿಸಿದಂಥವನಾಗಿ ಈ ಲೋಕದಲ್ಲಿ ಅವತರಿಸಿದನು. ಪೃಥ್ವಿಯಲ್ಲಿ ಬ್ರಹ್ಮವಿಚಾರ ಸಾಧಕರಿಗೆಲ್ಲ ಆಶ್ರಯದಾಯಕರಾಗಿರುವ ಜ್ಞಾನಿಗಳ ಜನ್ಮಸ್ಥಾನವು ಈ ಭರತಭೂಮಿಯಾಗಿರುವದು. ಅದರ ಪೈಕಿ ನಿಜಾಮ ದೇಶದ ಬೀದರ ಜಿಲ್ಲೆಯಲ್ಲಿ ಚಾಳಿಕಾಪುರವೆಂಬ ಪವಿತ್ರ ಗ್ರಾಮವಿರುವದು. ಈ ಗ್ರಾಮದೊಳಗೆ ಮಹಾ ಶಿವಭಕ್ತನಾಗಿ ಪರಮಾತ್ಮ ಚಿಂತನೆಯಲ್ಲಿ ನಿರತನಾಗಿರುವಂಥಾ ಗುರುಶಾಂತಪ್ಪನೆಂಬ ಸದ್ಗೃಹಸ್ಥನಿದ್ದನು. ಆತನಿಗೆ ಪತಿವ್ರತಾಶಿರೋಮಣಿಯಾದ ದೇವಮಲ್ಲಮ್ಮ ಎಂಬ ಪತ್ನಿ ಇದ್ದಳು. ಅವರು ನಿತ್ಯ ಶಿವಧ್ಯಾನ ಮಾನಸ ಪೂಜಾದಿಗಳಿಂದ

ವೃಷಭಧ್ವಜನನ್ನು ಸಂತೋಷಪಡಿಸುತ್ತಲೂ, ಸಾಧು ಸಜ್ಜನರನ್ನು ಪೂಜಿಸುತ್ತಲೂ, ಬಹು ಆದರದಿಂದ ಅತಿಥಿಗಳನ್ನು ಉಪಚರಿಸುತ್ತಲೂ ಇರುತ್ತಿದ್ದರು. ಈ ಪ್ರಕಾರದ ಆಚರಣೆಯಿಂದ ಆ ದಂಪತಿಗಳು ವಿವೇಕಾದಿ ಸಾಧನ ಚತುಷ್ಟಯ ಸಂಪನ್ನರಾಗಿ ಶ್ರೀ ವೀರಭದ್ರ ಸ್ವಾಮಿಗಳೆಂಬ ಮಹಾತ್ಮರನ್ನು ಗೃಹದಲ್ಲಿಯೇ ಇಟ್ಟುಕೊಂಡು ಸೇವಿಸುತ್ತಿದ್ದರು. ಅವರ ಅನನ್ಯ ಸೇವೆಯಿಂದ ತೃಪ್ತರಾಗಿ ಬ್ರಹ್ಮಜ್ಞಾನಭರಿತರಾದಂಥ ಆ ವೀರಭದ್ರ ಸ್ವಾಮಿಗಳು ಬ್ರಹ್ಮೈಕ್ಯ ಉಪದೇಶಯುಕ್ತವಾದ ಶೂನ್ಯ ಸಂಪಾದನಾದಿಕ ಗ್ರಂಥಗಳನ್ನು ದಂಪತಿಗಳಿಗೆ ಬೋಧಿಸುತ್ತಿದ್ದರು. ಜ್ಞಾನರಸಪೂರಿತಗಳಾದ ಆ ಗ್ರಂಥಗಳನ್ನು ಗುರುಮುಖದಿಂದ ಶ್ರವಣಮಾಡಿದ ಮಾತ್ರದಿಂದ ಅವರು ಸ್ವರೂಪ ಭಾವವನ್ನು ನಿಃಸಂದೇಹವಾಗಿ ಪಡೆದರು. ಹೀಗಿರುತ್ತಾ ಈ ದಂಪತಿಗಳಿಗೆ ಮೂರು ಮಂದಿ ಪುತ್ರರು ಆದರು. ಅದರೊಳಗೆ ಮೂರನೇಯವನೇ ಶ್ರೀ ಸಿದ್ಧಗುರುವರನು. ಶಕೆ 1758 ರ ಚೈತ್ರ ನವಮಿ ದಿವಸ ಶ್ರೀ ಸಿದ್ಧನ ಅವತಾರವಾಯಿತು.

ಚಿಕ್ಕವನಿರುವಾಗಲೇ ಸಿದ್ಧನು ತನ್ನ ತಾಯಿಯು ಶ್ರವಣಕ್ಕೆ ಕೂತಿರುವಾಗ ತಾನೂ ಸಮೀಪ ಕೂತುಕೊಂಡು ಬಹು ಆದರದಿಂದ ಶ್ರವಣ ಮಾಡುತ್ತಿದ್ದನು. ಬಾಲ್ಯಾವಸ್ಥೆಯಿಂದ ಸಿದ್ದನಿಗೆ ನಿತ್ಯ ಈ ಪ್ರಕಾರ ವೇದಾಂತ ಶ್ರವಣವಾಗುತ್ತಿದ್ದು ಆತನು ಮೂರು ವರ್ಷ ವಯಸ್ಸಿನಲ್ಲಿಯೇ ಶಾಸ್ತ್ರ ವಿಷಯದಲ್ಲಿ ಬಹು ಕುಶಲನಾದನು. ಒಂದಾನೊಂದು ದಿನ ಶ್ರವಣ ಕಾಲದಲ್ಲಿ ಲಿಂಗೈಕ್ಯ ವಿಚಾರವೂ ಹೊರಡಲು, ಅದನ್ನು ಸಂಪೂರ್ಣವಾಗಿ ವಿವೇಚನ ಮಾಡಿ ತಾನೂ ಲಿಂಗೈಕ್ಯವನ್ನು ಸಂಪಾದಿಸಿಕೊಳ್ಳಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡನು ಮತ್ತು ಈ ಹೇತುವಿನಿಂದ ಸರ್ವ ಪ್ರಾಣಿಗಳನ್ನು ಸಮಭಾವದಿಂದ ನೋಡಲಾರಂಭಿಸಿದನು.

ಒಂದಾನೊಂದು ದಿವಸ ಸಿದ್ಧನು ಬಾಲಕರ ಕೂಡ ಆಡುತ್ತಿರುವಾಗ, ಬಾಲಕರೆಲ್ಲ ಕೂಡಿ ಸಿದ್ದನಿಗೆ ಎಳ್ಳು ಕೇಳುವವರಾದರು.ಆಗ ಸಿದ್ಧನು ಅವರಿಗೆ ಆಶ್ವಾಸನೆ ಕೊಟ್ಟು ತನ್ನ ಮನೆಗೆ ಕರಕೊಂಡು ಬಂದನು. ಅವರನ್ನು ಕರೆದುಕೊಂಡು ಅಡಿಗೆ ಮನೆಯೊಳಗೆ ಹೊಕ್ಕು

ನೋಡುತ್ತಿರುವಾಗ, ಎಳ್ಳಿನ ಗಡಿಗೆಯು ಆತನ ಕೈಗೆ ನಿಲುಕಲಾರದಷ್ಟು ಉನ್ನತವಾದ ನೆಲುವಿನ ಮೇಲಿತ್ತು. ಆಗ ಸಿದ್ಧನು ಒಂದು ಬಡಿಗೆ ತಂದು ಅದರಿಂದ ಆ ಗಡಿಗೆಯ ಬುಡಕ್ಕೆ ಚುಚ್ಚಿ ತೂತು ಮಾಡಿದನು. ತತ್ಕಾಲ ಎಳ್ಳು ಧಾರಾಕಾರವಾಗಿ ಸುರಿಯುತ್ತಿರುವುದನ್ನು ನೋಡಿ, ಹುಡುಗರೆಲ್ಲಾ ತಮತಮಗೆ ಬೇಕಾದಷ್ಟು ಕಟ್ಟಿಕೊಂಡು ಹೋದರು. ಅವರನ್ನು ಕಂಡು ಇತರ ಅನೇಕರೂ ಬಂದು ನೋಡಲು, ಅಲ್ಪವಾದ ಎಳ್ಳಿನ ಗಡಿಗೆಯ ಕೆಳಗೆ ಮಹಾತ್ತಾದ ಎಳ್ಳಿನ ರಾಶಿಯಿದ್ದು ಎಷ್ಟೋ ಮಂದಿ ಅದರೊಳಗಿಂದ ಕಟ್ಟಿಕೊಂಡು ಹೋಗುತ್ತಿದ್ದರು. ಇದನ್ನು ಕಂಡು ಬಹು ಆಶ್ಚರ್ಯಭರಿತರಾಗಿ ಇದು ಬಾಲರೂಪದಿಂದ ಕಾಣಿಸಿಕೊಳ್ಳುವ ಸಾಕ್ಷಾತ್ ಅವತಾರಿಕನಾದ ಸಿದ್ಧನ ಮಹಿಮೆಯೆಂದು ಆತನನ್ನು ಕೊಂಡಾಡಿದರು. ಸಾವಿರಾರು ಗಡಿಗೆಯೊಳಗೆ ಹಿಡಿಸಲಾರದಷ್ಟು ಈ ಎಳ್ಳಿನ ರಾಶಿ ಒಂದು ಚಿಕ್ಕ ಗಡಿಗೆಯೊಳಗಿಂದ ಹ್ಯಾಗೆ ಬಂತು ? ಎಂದು ಸಿದ್ಧನ ಖ್ಯಾತಿಯನ್ನು ಜನರು ಎಲ್ಲಾ ಕಡೆಯಲ್ಲಿ ವರ್ಣಿಸುತ್ತಿದ್ದರು.

ಅಷ್ಟರಲ್ಲಿ ಸಿದ್ಧನ ತಾಯಿ ದೇವಮಲ್ಲಮ್ಮನು ಮನೆಯೊಳಗೆ ಬಂದು ನೋಡಲಾಗಿ, ನಿಜಪುತ್ರನ ಕರ್ತೃತ್ವ ಕಂಡು ಆಶ್ಚರ್ಯಚಕಿತಳಾದಳು.ಸಿದ್ಧನನ್ನು ಕುರಿತು ಕೇಳುತ್ತಾಳೆ- “ಮುದ್ದು ಮಗನೇ, ಇದು ಹ್ಯಾಗೆ ಘಟಿಸಿತು ?” ಸಿದ್ಧನು ಉತ್ತರ ಕೊಟ್ಟಿದ್ದೇನೆಂದರೆ"- “ಎಲೈ ತಾಯಿಯೇ ಈ ಚಮತ್ಕಾರಿಕ ಕಾರ್ಯವನ್ನು ನನ್ನಿಂದಾದ್ದಲ್ಲ. ನಿನ್ನ ಅನುಪಮವಾದ ಗುರುಸೇವೆಯ ಮಹಿಮೆಯಿಂದ ಇದು ನಿಶ್ಚಯವಾಗಿ ಘಟಿಸಿತು. ಹಾಗಾದರೆ, ಹೇಳುತ್ತೇನೆ ಕೇಳು. ತಿಲಪಾತ್ರೆವೆಂಬುದೇ ಜ್ಞಾನಿಯ ಶರೀರವು, ಅದರೂಳಗಿಂದ ಹೊರಡುವ ಜ್ಞಾನೋಪದೇಶದ ವಚನಗಳೆ ಎಳ್ಳು. ಆ ಜ್ಞಾನಿಯ ವಚನಗಳ ಘನ ಪ್ರವಾಹವು ಸಾವಿರಾರು ಅಜ್ಞಾನಿ ಘಟಗಳಲ್ಲಿ ಹಿಡಿಸಲಾರದೆ ಇದ್ದರೂ ಅವುಗಳಿಂದ ಸರ್ವರೂ ತೃಪ್ತಿಯನ್ನು ಹೊಂದುವರು. ಈ ಪ್ರಕಾರ ಸಿದ್ಧನ ವಚನ ಕೇಳಿ, ಧನ್ಯಭಾವವನ್ನು ಹೊಂದಿರುವ ದೇವಮಲ್ಲಮ್ಮ, ಸಿದ್ಧನು ಪೂರ್ಣ ಶಿವಾವತಾರಿಕನು ಎಂದು ತಿಳಿದುಕೊಂಡಳು.ಕೂಡಲೇ ಪುತ್ರ ಮೋಹದಿಂದ ಆವರಿಸಲ್ಪಟ್ಟವಳಾಗಿ ಸಿದ್ಧನನ್ನು

ಅಪ್ಪಿಕೊಳ್ಳಲು, ಆತನು ಬಾಲಭಾವವನ್ನು ಸ್ವೀಕರಿಸಿದವನಾಗಿ, ತಪ್ಪಿಸಿಕೊಂಡು ಹುಡುಗರ ಕೂಡ ಆಡಲಿಕ್ಕೆ ಓಡಿಹೋದನು.

ಹೀಗಿರತ್ತಾ ಒಂದಾನೊಂದು ದಿವಸ ತಾಯಿಯು ಸಿದ್ಧನನ್ನು ಕುರಿತು - "ಎಲೈ ಮಗನೇ, ನೀನು ಐದು ವರ್ಷದವನಾದಿ. ಇನ್ನು ಮೇಲೆ ವಿದ್ಯಾಭ್ಯಾಸ ಮಾಡಲಿಕ್ಕೆ ಶಾಲೆಗೆ ಹೋಗಬೇಕು." ಎಂದು ಹೇಳಲು ಸಿದ್ಧನು, "ಅವ್ವಾ, ಇದೇನು ಉದ್ಯೋಗ ನನಗೆ ಹಚ್ಚುತ್ತಿ! ನನಗೆ ಶಾಲೆಯು ಅಂತರ್ಬಾಹ್ಯದಲ್ಲಿ ಸರ್ವತ್ರವಿರುವದು. ಅಂತಃಕರಣ ವೃತ್ತಿಯೊಳಗೆ ಅದಿಷ್ಠಾನ ಚೈತನ್ಯರೂಪದಿಂದರುವ ಶಿವನನ್ನು ಜೀವನು ಧ್ಯಾನದೊಳಗೆ ನೋಡುತ್ತಿರುವಾಗ, ಮತ್ತು ಬಾಹ್ಯ ಸರ್ವವಸ್ತುಗಳಲ್ಲಿ ಅದೇ ಪರಮಾತ್ಮನನ್ನು ಕಾಣುತ್ತಿರುವಾಗ ಯಾವ ವಿದ್ಯೆಯು ಫಲಿಸುತ್ತಿರುವದೋ ಅಂಥಾ ವಿದ್ಯಾಭ್ಯಾಸ ಮಾಡಿದ ಶಾಲೆಯಲ್ಲಿ ನಾನು ಸದ್ಯೋದಿತ ಆನಂದರೂಪನಾಗಿ ಇರುತ್ತೇನೆ. ಹೀಗಿರುವಾಗ ಜೀವನು ತನ್ನ ಸ್ವರೂಪವನ್ನು ಮರೆತು ಬಂಧದೊಳಗೆ ಬೀಳುವಂತೆ ಮಾಡಿಸುವ ಲೌಕಿಕ ವಿದ್ಯೆಯನ್ನು ಕಲಿಸುವಂಥಾ ಸ್ಥಾನವಾದ ನಿನ್ನ ಶಾಲೆಯ

ಕೆಲಸವೇನು ?" ಎಂದು ಅನ್ನುವ ಸಿದ್ಧನ ಭಾಷಣವನ್ನು ಕೇಳಿ ದೇವಮಲ್ಲಮ್ಮನು ಚಕಿತ ಚಿತ್ತಳಾಗಿ, ಸಿದ್ಧನಿಗೆ ಅಂದಿನಿಂದ ಗುರುಸನ್ನಿಧಿಯಲ್ಲಿ, ನೇಮದಿಂದ ವೇದಾಂತ ಶ್ರವಣ ಮಾಡಿಸುವಂಥವಳಾದಳು.

ಒಂದಾನೊಂದು ದಿನ ಹುಡುಗರ ಕೂಡ ಆಡುತ್ತಿರುವಾಗ ಸಿದ್ಧ ಬಾಲಕನು ಒಂದು ಎಮ್ಮೆಯನ್ನು ಕಂಡು, ಅದರ ಬೆನ್ನ ಮೇಲೆ ಹತ್ತಿ ಕೂತುಕೊಂಡು, ಮತ್ತು ಹುಡುಗರಿಗೆ ಕೂಗಿ -"ನೋಡಿರಿ ನಾನು ಆನೆಯ ಮೇಲೆ ಕೂತಿರುವೆನು ; ನೀವೆಲ್ಲಾ ವಾದ್ಯಗಳನ್ನೂ ಬಾರಿಸುತ್ತ ಗ್ರಾಮದೊಳಗೆ ಉತ್ಸವವನ್ನು ಮೆರೆಸಿರಿ. ಇದನ್ನು ಕೇಳಿ ಬಾಲಕರೆಲ್ಲಾ ಆನಂದದಿಂದ ನಾನಾ ವಾದ್ಯ ಧ್ವನಿಗಳನ್ನು ಮಾಡುತ್ತ, ನಗುತ್ತ, ಹಾರಾಡುತ್ತ ಮುಂದಕ್ಕೆ ಸಾಗಿದರು. ಆದರೆ ಎಮ್ಮೆಯು ಮುಂದಕ್ಕೆ ಹೆಜ್ಜೆ ಇಡಲೊಲ್ಲದು. ಸಿದ್ಧನೂ, ಹುಡುಗರೂ ಎಷ್ಟು ಪ್ರಯತ್ನ ಮಾಡಿದರೂ, ಅದೂ ಚಲಿಸಲಿಲ್ಲ. ಆಗ ಸಿದ್ಧನು ಸಿಟ್ಟಿಗೆದ್ದು -"

ಎಮ್ಮೆಯೇ ನೀನು ಮೃತನಾಗು " ಎಂದ ಕೂಡಲೇ ಅದು ನಿರ್ಜೀವವಾಗಿ ಭೂಮಿಗೆ ಬಿತ್ತು. ಇದನ್ನು ನೋಡಿ ಹುಡುಗರು ಓಡಿಹೋಗಿ ಸಿದ್ದನ ತಾಯಿಗೆ ಈ ವರ್ತಮಾನವನ್ನು ತಿಳಿಸಿ "ಸಿದ್ಧನು ಶಪಿಸಿದ ಕೂಡಲೇ ನಿಮ್ಮ ಎಮ್ಮೆಯು ಭೂಮಿಗೆ ಬಿದ್ದು ಸತ್ತುಹೋಯಿತು." ಎಂದು ಆಕೆಯನ್ನು ಕುರಿತು ಹೇಳಿದರು. ಇದನ್ನು ಕೇಳಿ ದೇವಮಲ್ಲಮ್ಮನು ಮನಸ್ಸಿನಲ್ಲಿ ಬಹಳ ಗಾಬರಿಯಾಗಿ ಸಿದ್ದನ ಕಡೆಗೆ ಓಡಿಬಂದು, ಸತ್ತು ಬಿದ್ದ ಎಮ್ಮೆಯನ್ನು ಕಂಡು, ಪುತ್ರನನ್ನು ಕುರಿತು ಅನ್ನುತ್ತಾಳೆ - "ಇದೇನು ಮಾಡಿದಿ. ಎಮ್ಮೆಯನ್ನು ಯಾತಕ್ಕೆ ಕೊಂದಿ. ಶಿವ ಶಿವಾ ನಾನು ಇನ್ನೇನು ಮಾಡಲಿ ".ಎಂದು ಆರ್ತ ಸ್ವರದಿಂದ ಅಳುವುದನ್ನು ಕೇಳಿ ಸಿದ್ದನಿಗೆ ಕರುಣೆ ಹುಟ್ಟಿ, "ತಾಯಿಯೇ, ನಿನಗೆ ಎಮ್ಮೆ ಬೇಕಾಗಿದ್ದರೆ ಇಷ್ಟು ದುಃಖ ಯಾತಕ್ಕೆ ಮಾಡಬೇಕು ? ಎಂದು ನುಡಿದು, ಸಿದ್ಧನು "ಓಂ ನಮಃ ಶಿವಾಯ" ಎಂಬ ಮಂತ್ರವನ್ನು ಉಚ್ಚರಿಸಿ,ಎಮ್ಮೆಯನ್ನು ಸ್ಪರ್ಶಿಸಿದನು. ತತ್ಕಾಲವೇ ಆ ಎಮ್ಮೆಯು ಪಸರಿಸಿದ ಕೈಕಾಲುಗಳನ್ನು ಎಳೆದುಕೊಂಡು ಸಜೀವವಾಗಿ ಎದ್ದು

ನಿಂತಿತು. ಇದನ್ನು ನೋಡಿ ಸೂತ್ತುಮುತ್ತಲಿನ ಜನರು, "ಇದು ಮಹಾ ಅಘಟಿತವಾದ ಕರಣಿ," ಎಂದು ನುಡಿಯುತ್ತ ಆಶ್ಚರ್ಯಚಕಿತರಾದರು ಮತ್ತು ಕೆಲವರು, "ಈತನು ನಮ್ಮ ಉದ್ಧಾರದೆಶೆಯಿಂದ ಬಂದಿರುವ ಈಶ್ವರನೋ, ವಿಷ್ಣುವೋ ಅಥವಾ ಯಾವನಾದರೂ ಋತೀಶ್ವರನೋ, ತಿಳಿಯಲಾರೆವು" ಎಂದು ಅನ್ನುತ್ತಿರುವಾಗ ಅವರನ್ನು ಕುರಿತು ಸಿದ್ಧನು ಅಂದದ್ದು "ಎಲ್ಲೈ ಪುಣ್ಯಾತ್ಮರುಗಳಿರಾ, ಕೇಳಿರಿ, ಇತರರ ವಚನವನ್ನು ಕೇಳದೆ ತಮೋಗುಣದಿಂದ ತಟಸ್ಥವಾಗಿರುವಂಥಾ ಅಹಂಬುದ್ದಿಯೇ ಈ ಎಮ್ಮೆಯು. ಅಂಥಾ ಅಹಂಬುದ್ಧಿಯ ತಮಸ್ಸನ್ನು ನಾಶಮಾಡುವ ಉದ್ದಿಶ್ಯವಾಗಿ ಆತ್ಮನು ಅದರ ಮೇಲೆ ಆರೋಹಣ ಮಾಡಿದರೂ, ಅದು ಸರ್ವಥಾ ಚಲಿಸಲಿಲ್ಲ. ಇದನ್ನು ಕಂಡು ಆತ್ಮನು ಸಂಕಲ್ಪ ಮಾಡಿದ ಕೂಡಲೇ ಅಹಂತೆಯು ಲಯಾವಸ್ಥೆಯನ್ನು ಹೊಂದಿತು. ಕೂಡಲೆ, ಈ ಅಹಂತೆಯನ್ನು ಬಹುಕಾಲ ಪಾಲನೆ ಮಾಡಿದ ಮೂಲಮಾಯಯು ಓಡಿಬಂದು, ಅಹಂತತೆಯನ್ನು ಬದುಕಿಸಬೇಕೆಂದು ಆತ್ಮನಿಗೆ ಪ್ರಾರ್ಥಿಸಿದಳು. ಈ

ಪ್ರಾರ್ಥನೆಯನ್ನು ಕೇಳಿ ಆತ್ಮನು ಅಹಂತೆಯನ್ನು ಸಜೀವ ಮಾಡಿದನು. ಈಗ ಆ ಅಹಂತತೆಯು ಆತ್ಮನ ಭಕ್ತಿಯಿಂದಯುಕ್ತವಾಗಿ ಶಾಂತರೂಪದಿಂದ ಜಗತ್ತಿನಲ್ಲಿ ವರ್ತಿಸುವುದು."ಈ ಸವಿಚಾರ ಭಾಷಣವನ್ನು ಕೇಳಿ ಸರ್ವರೂ ಅನ್ನುತ್ತಾರೆ. - "ಆಹಾ, ಎಂಥಾ ಗಹನವಾದ ವಿಚಾರ! ನಮಗಿಂತ ಈತನು ಎಷ್ಟೋ ಚಿಕ್ಕವನಂತೆ ಕಾಣಿಸುತ್ತಿದ್ದರೂ, ಈತನ ಜ್ಞಾನವು ಆತರ್ಕ್ಯವಾದದ್ದು." ಸಿದ್ಧಬಾಲಕನು ಸುಂದರವಾಗಿಯೂ ಮನೋಹರವಾಗಿಯೂ ಶೋಭಿಸುತ್ತಿರುವ ಮೂರ್ತಿಯನ್ನು ಕಂಡು, ಸರ್ವರು "ಈತನ ಮಾತೆಯು ಧನ್ಯಳು, ಧನ್ಯಳು. ನಾವಾದರೂ ಈತನ ಸಂಗದಿಂದ ಧನ್ಯರು. ಈತನ ಪ್ರತ್ಯಕ್ಷ ತ್ರೈ ಮೂರ್ತಿಸ್ವರೂಪನಿರುವನು," ಎಂದು ಅನ್ನುತ್ತಾ ಹೊರಟು ಹೋಗುವಂಥವರಾದರು.

ಒಂದಾನೊಂದು ದಿನ ಸಿದ್ಧನು ತನ್ನ ಸಂಗಡಿಗರನ್ನು ಕುರಿತು, ಎಲೈ ಬಾಲಕರೇ ನನ್ನ ಸಂಗಡ ಕರೆಗೆ ಸ್ನಾನಕ್ಕೆ ಬನ್ನಿರಿ" ಎಂದು ಅಂದದ್ದು ಕೇಳಿ ಅವರು ಅತ್ಯಾನಂದದಿಂದ ಸಿದ್ಧನನ್ನು ಹಿಂಬಾಲಿಸಿದರು. ಕೆರೆಗೆ ಬಂದು ಸ್ನಾನಕ್ಕೆ ಸರ್ವರೂ

ಇಳಿಯುತ್ತಿರುವಾಗ, ಒಬ್ಬನು ಮಾತ್ರ ಭಯಯುಕ್ತನಾಗಿ ದಂಡೆಯ ಮೇಲೆಯೇ ನಿಂತುಕೊಂಡು. ಆಗ ಸಿದ್ದನು, ಇವನ ಭಯವನ್ನು ನಾಶಪಡಿಸಬೇಕೆಂಬ ಉದ್ದಿಶ್ಯವಾಗಿ ಅವನನ್ನು ಬಲಾತ್ಕಾರದಿಂದ ಹಿಡಿದು ಆಳವಾದ ನೀರಿರುವಲ್ಲಿ ಎಳೆದುಕೊಂಡು ಹೋದನು. ಭಯಭೀತನಾಗಿ ಆ ಬಾಲಕನು ಕೂಗುತ್ತಿರುವಾಗ, ಇತರ ಹುಡುಗರು ಬಂದು ಅವನನ್ನು ಬಿಡಬೇಕೆಂದು ಎಷ್ಟು ಹೇಳಿದರೂ ಸಿದ್ದನು ಬಿಡಲಿಲ್ಲ. ಆಗ ಅವರೆಲ್ಲರೂ ಕೂಡ ಸಿದ್ಧನನ್ನು ಹಿಡಿದುಕೊಳ್ಳಬೇಕೆಂದು ಯತ್ನಿಸಿದರೂ ಆತನು ಅವರ ಕೈಗೆ ಸಿಕ್ಕದೆ, ಆ ಹುಡುಗನನ್ನು ಬಹಳ ಕಂತವಾದ ಸ್ಥಾನಕ್ಕೆ ಒಯ್ದು ಮುಳುಗಿಸಿಬಿಟ್ಟನು. ಆಮೇಲೆ ಸಿದ್ಧನು ದಂಡೆಗೆ ಬಂದ ಕೂಡಲೇ ಸರ್ವರೂ "ಎಲೈ ಸಿದ್ಧನೇ, ನೀನೇ ಆ ಹುಡುಗನನ್ನು ಕೊಂದಿ. ನಾವೇನೂ ಅರಿಯೆವು," ಎಂದು ಅಂದದ್ದು ಕೇಳಿ, ಸಿದ್ಧನು, "ನೀವ್ಯಾಕೆ ಇಷ್ಟು ಗುಲ್ಲು ಮಾಡುತ್ತೀರಿ, ಆ ಬಾಲಕನ ಭಯ ಹೋಗಿ ನಿರ್ಭಯನಾದನು. ಅವನಿಗೆ ಮುಂದೆ ದುಃಖವು ಉಳಿಯಲೇ ಇಲ್ಲ" ಎಂದು ಅಂದನು. ಅದಕ್ಕವರು " ಸತ್ಯಮಾತು, ದೇಹವೇ

ನಾಶವಾದ ಬಳಿಕ ಭಯವೆತ್ತಣದು!" ಅಂದರು. ಕೆಲವರು ಓಡಿಹೋಗಿ ಆ ಹುಡುಗನ ತಾಯಿಗೆ ನಡೆದ ಸಂಗತಿಯನ್ನು ಹೇಳಿದರು. ಆ ಕೂಡಲೇ ತನ್ನ ಒಬ್ಬಂಟಿಗನಾದ ಪುತ್ರನ ಮರಣ ವಾರ್ತೆಯನ್ನು ಕೇಳಿ ಅತಿ ದುಃಖಿತಳಾದ ತಾಯಿಯು ಕೆರೆಗೆ ಓಡಿಬಂದು, ಸಿದ್ಧನನ್ನು ನೋಡಿ, "ಎಲೋ ಇದೆಂಥಾ ದುಷ್ಟತನ!" ಎಂದು ಕೇಳಲಾಗಿ, ಸಿದ್ಧನು ಶಾಂತವಚನದಿಂದ, "ಎಲೈ ತಾಯಿಯೇ, ಇಲ್ಲಿ ನನ್ನ ದುಷ್ಟತನವೇನೂ ಇಲ್ಲ. ನಿನ್ನ ಮಗನು ಜಲರೂಪಿ ಪರಮಾತ್ಮನಲ್ಲಿ ಮಗ್ನನಾಗಿದ್ದು, ಭಯರಹಿತನಿರುವನು," ಎಂದು ಹೇಳುವುದು ಕೇಳಿ ತಾಯಿಯು, "ಸಾಕು, ಸಾಕು, ನಿನ್ನ ವೇದಾಂತ, ನನ್ನ ಪುತ್ರನನ್ನು ನೀನು ಸತ್ಯವಾಗಿ ಕೊಂದು ಬಿಟ್ಟೆ, ಕೆರೆಯೊಳಗೆ ಬಿದ್ದಿರುವ ಆ ನನ್ನ ರತ್ನವನ್ನು ಈಗಲೇ ತಂದುಕೊಡು." ಎಂದು ದೀರ್ಘ ಸ್ವರದಿಂದ ಅಳಲಾರಂಭಿಸಿದ ಆ ಮಾತೆಯನ್ನು ಕಂಡು, ಕರುಣಾದ್ರ್ರ ಹೃದಯನಾಗಿ ಸಿದ್ಧನು ಅಂದದ್ದು, "ಎಲೈ ತಾಯಿಯೇ, ನೀನು ಗಾಬರಿಯಾಗಬೇಡ.

ನಿನ್ನ ಮಗನು ಆನಂದ ಉದಧಿಯೊಳಗೆ ಜೀವಂತನಾಗಿರುವನು. ನೀನು ಈಗಲೇ ಆತನ ಹೆಸರಿನಿಂದ ಕರೆದರೆ ಆತನು ಎದ್ದ ಬರುವನು." ಇದನ್ನು ಕೇಳಿ ಆ ತಾಯಿಯು "ದೇವದತ್ತಾ ಬಾ" ಎಂದು ಕೂಗಿದಳು. ಆ ಕ್ಷಣವೇ ನೀರೊಳಗೆ ಕಲ್ಲೋಲವಾಗಿ ಆ ಹುಡುಗನು, ಪೃಷ್ಠ ಭಾಗದಲ್ಲಿ ಕಾಣಿಸಿಕೊಂಡು, ಈಸುತ್ತ ತೀವ್ರವಾಗಿ ದಂಡೆ ಬಂದು ಮುಟ್ಟಿದನು. ಆತನ ತಾಯಿಯು ಅತ್ಯಂತ ಪ್ರೇಮಯುಕ್ತಳಾಗಿ ಓಡಿಬಂದು ಅವನನ್ನು ಅಪ್ಪಿಕೊಂಡು, "ಮುದ್ದು ಮಗನೇ, ನೀನು ಇಷ್ಟು ಹೊತ್ತು ಎಲ್ಲಿ ಇದ್ದಿ ? ನೀನು ಪರಲೋಕಕ್ಕೆ ತೆರಳಿದಿ ಎಂದು ನಾನು ಭಯಗ್ರಸ್ತಳಾಗಿದ್ದೆ," ಎಂದು ಅಂದದ್ದು ಕೇಳಿ ಆ ಬಾಲಕನು ಹಾಸ್ಯವದನದಿಂದ; "ಎಲ್ಯೆ ತಾಯಿಯೇ ನಾನು ಇಷ್ಟು ಹೊತ್ತು ಬ್ರಹ್ಮಾನಂದದೊಳಗಿದ್ದೆ. ಈಗ ಪುನಃ ದುಃಖರೂಪನಾದ ಜಗಜ್ಜಾಲವು ನನ್ನನ್ನು ಆವರಿಸಿಕೊಂಡಿತು" ಎಂದು ನುಡಿದನು. ಆಗ ತಾಯಿಯು, "ನೀನು ಬದುಕಿಕೊಂಡು ಬಂದಿ, ಒಳ್ಳೆಯದಾಯಿತು. ಇಲ್ಲದಿದ್ದರೆ ನಾನೂ ನೀರಿನಲ್ಲಿ ಬಿದ್ದು ಪ್ರಾಣವನ್ನು ತೊರೆಯುತ್ತಿದ್ದೇನು" ಎಂದು ಕಣ್ಣೀರು ಸುರಿಸುತ್ತಾ

ಮಗನನ್ನು ಮೋಹದಿಂದ ಪುನಃ ಪುನಃ ಅಪ್ಪಿ ಕೊಂಡಳು. ಇದನ್ನು ಕಂಡು ಸರ್ವರೂ ಆನಂದಭರಿತರೂ, ಸಿದ್ಧನ ಕೃತ್ಯವನ್ನು ನೋಡಿ ಆಶ್ಚರ್ಯಚಕಿತರೂ ಆದರು. ಅವರನ್ನು ಕುರಿತು ಸಿದ್ಧನು ಅಂದದ್ದೇನೆಂದರೆ- "ಹೇ ಸಜ್ಜನರೇ ಕೇಳುವಂಥವರಾಗಿರಿ. ಈ ವೃತ್ತದ ಗೂಢವೂ ಹೀಗಲ್ಲ. ಈ ಬಾಲಕನೇ ಅಜ್ಞಾನ ಸ್ಥಿತಿಯಲ್ಲಿರುವ ಜೀವನು. ಇವನು ತನ್ನ ಉಪಾಧಿಯನ್ನು ಬಿಟ್ಟು ಬ್ರಹ್ಮದಲ್ಲಿ ಮಗ್ನನಾಗಲಿಕ್ಕೆ ಭಯಪಡುವನು. ಈ ಪ್ರಕಾರ ಅವನು ಭಯಪಡುವದರಿಂದ ಅವನಿಗೆ ದುಃಖ ತಪ್ಪದೆಂದು ಎಂದು ದಯಾಳುವಾದ ಸದ್ಗುರುವು ಬಲಾತ್ಕಾರದಿಂದ ಜೀವನ ದೇಹಾಭಿಮಾನವನ್ನು ಬಿಡಿಸಿ, ಆತನನ್ನು ಬ್ರಹ್ಮಾನಂದದಲ್ಲಿ ಮುಳುಗಿಸಿಬಿಟ್ಟನು." ಈ ಪ್ರಕಾರ ಸಿದ್ಧನ ವಚನವನ್ನು ಕೇಳಿ ಜನರೆಲ್ಲರೂ, "ಈತನು ಸಾಕ್ಷಾತ್ ಮಹಾದೇವನ ಅವತಾರವು. ಇಲ್ಲದಿದ್ದರೆ ಇಷ್ಟು ಚಿಕ್ಕ ವಯಸ್ಸಿನಲ್ಲಿ ಸಿದ್ಧನ ಚರಣಕ್ಕೆರಗಲಿಕ್ಕೆ ಬಂದರು. ಅದನ್ನು ಕಂಡು ಸಿದ್ಧನು ತಪ್ಪಿಸಿಕೊಂಡು ಓಡಿ ಮನೆಗೆ ಬಂದನು.

ಮತ್ತೊಂದು ದಿನ ಸಿದ್ಧನಾಥನು ಬಹು  ಬಾಲಕರನ್ನು ಕೂಡಿಕೊಂಡು ಒಂದು ನೀರಲ ಹಣ್ಣಿನ  ತೋಟಕ್ಕೆ ಹೋದನು.ತೋಟವನ್ನು  ಪ್ರವೇಶಿಸಿದ ಕೂಡಲೇ ಹುಡುಗರೆಲ್ಲರೂ ಉತ್ತಮವಾದ ಹಣ್ಣುಗಳನ್ನು  ಆರಿಸುವ ಉದ್ದೇಶದಿಂದ ಅತ್ತಿತ್ತ ಓಡುತ್ತಿದ್ದರು. ಆಗ ಸಿದ್ಧನು ಒಂದು ಸ್ಥಾನದಲ್ಲಿ ಸ್ವಸ್ಥ ನಿಂತು ಮನಸ್ಸಿನಲ್ಲಿ ಅಂದುಕೊಳ್ಳುತ್ತಾನೆ - ಇವರು ಮಾಯಾಮೋಹಿತರಾಗಿವಿಷಯಗಳಲ್ಲಿ ಸಿಲುಕಿ, ಸರ್ವಕ್ಕೆ  ಕಾರಣವಾಗಿರುವ ಈಶನಾದ ನನ್ನನ್ನು ಮರೆತಿರುವರು. ಈಗ ಇವರನ್ನು  ನನ್ನ  ಕಡೆಗೆ ಎಳಕೊಂಡು ಇವರಿಗೆ ವಿವೇಕವನ್ನು  ಉಪದೇಶಿಸಬೇಕು,  ಎಂದುಕೊಂಡು ಸಿದ್ಧನು  ಏನು ಚಮತ್ಕಾರ ಮಾಡಿದರೆಂದರೆ, ಒಂದು ನೀರಲ ಹಣ್ಣನ್ನು  ಭೂಮಿಯ ಮೇಲೆ ಚೆಲ್ಲಿದ ಕೂಡಲೇ ಅಲ್ಲಿ ಒಂದು ಹಣ್ಣಿನ ರಾಶಿಯೇ ಉಂಟಾಯಿತು. ಅತ್ಯುತ್ತಮವಾದ ಪಕ್ವ ಫಲಗಳಿಂದ ಯುಕ್ತವಾದ ಆ ರಾಶಿಯನ್ನು  ಕಂಡು ಬಾಲಕರೆಲ್ಲರೂ ಅಲ್ಲಿಗೆ ಓಡಿಬಂದು, ಸಿದ್ಧನಿಗೆ ಕೇಳುತ್ತಾರೆ- "ನಾವು ಈವರೆಗೆ ನೋಡದ  ಉತ್ತಮವಾದ ಫಲಗಳ ಈ

ರಾಶಿಯು ಇಲ್ಲಿ ಹ್ಯಾಗೆ ಉಂಟಾಯಿತು ?ಈಶ್ವರನ ಕಾರ್ಯಗಳು ಅಘಟಿತವಾಗಿರುತ್ತವೆ." ಹೀಗೆಂದು ಅವರೆಲ್ಲರೂ ಅನೇಕ ಫಲಗಳನ್ನು ತಕ್ಕೊಂಡು ತಿಂದರು ಮತ್ತು ಫಲಗಳನ್ನು ಕಟ್ಟಿಕೊಳ್ಳುತ್ತಿದ್ದರು. ಆಗ ಸಿದ್ಧನು ಅವರನ್ನು ಕುರಿತು, "ನೀವು ಹೊಟ್ಟೆತುಂಬ ಹಣ್ಣುಗಳನ್ನು ತಿಂದಿರಲ್ಲ. ಆದರೆ ಯಾವತರ ಉಪಕಾರದಿಂದ ಈ ಸಮೃದ್ಧಿಯಾದ ಫಲಗಳ ರಾಶಿಯು ಸಿಕ್ಕಿತು ಎಂಬುದು ನೀವು ವಿಚಾರ ಮಾಡಲಿಲ್ಲ", ಎಂದು ಹೇಳಿದ್ದಕ್ಕೆ ಅವರು "ನಮಗೋಸ್ಕರ ಜಗದೀಶ್ವರನು ಈ ಸ್ವಾಧಿಷ್ಟವಾದ ಫಲಗಳನ್ನು ಕೃಪೆಯಿಂದ ನಿರ್ಮಿಸಿದನು. ಆದರೆ ನಮ್ಮ ಮೂರ್ಖತ್ವದಿಂದ ಆತನನ್ನು ನಾವು ಅರಿಯದೇ ಹೋದೆವು. ಈಗ ಈ ಹಣ್ಣುಗಳನ್ನು ಇಲ್ಲೇ ಬಿಟ್ಟು ನಾವು ಮನೆಗೆ ಹೋಗೋಣ" ಎಂದು ಅಂದರು. ಆಗ ಸಿದ್ದನು, "ಎಲೈ ತಮ್ಮಗಳಿರಾ, ಈ ಹಣ್ಣುಗಳನ್ನು ಬೇಡುವೆವು ಎಂದು ಹೇಳುವಿರಿ, ಹಣ್ಣು ಬಿಟ್ಟರೆ ಅವನ್ನು ನೋಡುವಂಥ ಕಣ್ಣುಗಳನ್ನು ಬಿಡಲಾರಿರಿ. ಕಣ್ಣುಗಳಿಂದ ಪುನಃ ಪುನಃ ಹಣ್ಣುಗಳನ್ನು ನೋಡುತ್ತಲೇ ಚಿತ್ತಾಕರ್ಷಣವಾಗಿ ವಿಷಯಗಳ ಕಡೆಗೆ ಮನಸ್ಸು

ಹರಿಯುವದು. ಕಣ್ಣುಗಳಾದರೂ ಮುಚ್ಚಬಹುದು, ಆದರೆ ದೇಹಾಭಿಮಾನ ಸ್ಥಿರವಿರದು. ಅದು ಇರುವ ತನಕ ಈಶ್ವರ ಪ್ರಾಪ್ತಿಗೋಸ್ಕರ ಮಾಡಿದ ಯತ್ನಗಳೆಲ್ಲ ವ್ಯರ್ಥವಾಗಿರುವವು. ಈ ಅಭಿಮಾನವನ್ನು ತ್ಯಾಗ ಮಾಡಲಿಕ್ಕೆ ಜ್ಞಾನ ಧ್ಯಾನಾದಿಗಳಿಂದ ಯತ್ನವನ್ನು ಮಾಡತಕ್ಕದ್ದು; ಇದಕ್ಕೆ ತಪಉಪವಾಸಾದಿ ಇತರ ಉಪಾಯಗಳು ನಡೆಯಲಾರವು. ಈಶ್ವರ ಧ್ಯಾನದಿಂದ ಆತ್ಮಜ್ಞಾನವಾಗಿ ಅದರಿಂದ ಬ್ರಹ್ಮಾನಂದ ಪ್ರಕಟವಾಗುವದು. ಬ್ರಹ್ಮಾನಂದದಲ್ಲಿ ಚಿತ್ತವು ಮಗ್ನವಾಗಿರಲು, ವಿಷಯಭಾನವು ಉಳಿಯಲಾರದು. ಈಗ ನೀವು ಸಾಕಷ್ಟು ಹಣ್ಣುಗಳನ್ನು ತಕ್ಕೊಂಡು ಮನೆಗೆ ಹೋಗಿರಿ," ಎಂದು ಸಿದ್ಧನು ಅಂದದ್ದು ಕೇಳಿ, ಸರ್ವರೂ ಗೃಹಾಭಿಮುಖರಾದರು. ಸಿದ್ಧನ ಹಿಂದೆ ಅವರೆಲ್ಲರೂ ಹೋಗುತ್ತಿರುವಾಗ, ದಾರಿಯಲ್ಲಿ ಒಂದು ಸರ್ಪವನ್ನು ಕಂಡು ಹುಡುಗರೆಲ್ಲ ನಾಲ್ಕು ದಿಕ್ಕಿಗೆ ಓಡಹತ್ತಿದರು.ಆದರೆ ಸಿದ್ಧನು ಸರ್ಪದ ಸಮೀಪ ನಿಂತುಕೊಂಡು ಹುಡುಗರಿಗೆಲ್ಲ ಕರೆಯುತ್ತ, "ಹೆದರಬೇಡಿರಿ, ಇದು ಸತ್ತ ಹಾವು" ಎಂದು ಹೇಳಿದರೂ ಸಮೀಪ ಬರಲಿಕ್ಕೆ

ಅವರು ಹೆದರಿದರು. ಆಗ ಸಿದ್ಧನು ಆ ಹಾವನ್ನು ಕೈಯಿಂದ ಹಿಡಿದು ತೋರಿಸಿದಾಗ ಅವರು ಸಮೀಪ ಬಂದರು. ಆ ಸಮಯದಲ್ಲಿ ಅವರನ್ನು ಕುರಿತು ಸಿದ್ಧನು, "ನೋಡಿರಿ, ಲೋಕದಲ್ಲಿ ಹೀಗೆಯೇ ದೃಶ್ಯಮಾತ್ರಕ್ಕೆ ಹೆದರಿ ಹೋಗುವರು. ಆದರೆ ನಿರ್ಮಲವಾದ ಚಿತ್ತದಲ್ಲಿ ಭಾಸಿಸುವಂಥಾ ಸರ್ವ ವಸ್ತುಗಳ ಅಂತಃಸ್ಥಿತಿಯನ್ನು ಯಾರೂ ವಿಚಾರ ಮಾಡುವದಿಲ್ಲ. ಗುರೂಪದೇಶವಾದ ಕೂಡಲೇ ಈ ಅಂತರ್ದೃಷ್ಟಿಯು ತೆರೆಯುವದು. ಅದರಿಂದ ಜಗದಾಭಾಸವನ್ನು ಕಾಣದೆ ಸರ್ವತ್ರ ಸ್ವರೂಪ ಸತ್ತೆಯೇ ಭಾಸಮಾನವಾಗುವುದು ಸರ್ವದಲ್ಲಿಯೂ ಸ್ವರೂಪವನ್ನು ಕಾಣುತ್ತಲೇ ಭಯವೂ ಅಣುಮಾತ್ರವಾದರೂ ನಿಲ್ಲದು", ಎಂಬ ಸುವಿಚಾರ ಭಾಷಣವನ್ನು ಕೇಳಿದ ಕೂಡಲೇ, ಆ ಹುಡುಗರ ಅಂತರ ಹೃದಯದಲ್ಲಿ ವಿಚಾರವೂ ಉದ್ಭವಿಸಿತು. ಅನಂತರ ಅವರೆಲ್ಲರೂ ಸಿದ್ಧನನ್ನು ಗೃಹಕ್ಕೆ ಮುಟ್ಟಿಸಿ, ಆನಂದದಿಂದ ತಮ್ಮ ತಮ್ಮ ಮನೆಗಳಿಗೆ ಹೋಗವಂಥವರಾದರು.

ಶ್ರೀ ಸಿದ್ಧನಾಥನ ಮಹಿಮೆಯು ಅಗಾಧವಾಗಿದೆ. ಅದನ್ನು ವರ್ಣಿಸಲಾಗದೆ ವೇದವು ಕುಂಠಿತವಾಯಿತು. ಸದ್ಗುರುನಾಥನ ಪ್ರಸಿದ್ಧವಾದ ಗುಣಗಳನ್ನು ವರ್ಣಿಸುವಾಗ ಮನುಷ್ಯನು ಭವಾಬ್ದಿಯಿಂದ ಸಹಜವಾಗಿ ಉದ್ಧೃತನಾಗುವವನು ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಬಹು ಮಧುರವಾದ ಈ ದ್ವಿತೀಯಾಧ್ಯಾಯವನ್ನು ಶಿವದಾಸನು ಶ್ರೀ ಸಿದ್ಧಾರೂಢ ಚರಣಾರವಿಂದಗಳಲ್ಲಿ ಅರ್ಪಿಸಿರುವನು.